

# ನಾವು ಏನನ್ನು ನಂಬುತ್ತೇವೆಂಬುದು ಗಣನೀಯವೇ ?

## ಸತ್ಯವು–ದೇವರ ವಾಕ್ಯ :

ಒಳ್ಳೇದು, ಮೊದಲನೆಯದಾಗಿ ನಾವು ಒಂದು ಸರಳ ಪ್ರಶ್ನೆಯನ್ನು ಕೇಳೋಣ. ಒಬ್ಬ ಮನುಷ್ಯನು ದೈನಂದಿನ ಜೀವನದ ವಸ್ತುಗಳ ಬಗ್ಗೆ ಏನು ನಂಬುತ್ತಾನೆಂಬುದು ಗಣನೀಯವೇ ? ಉದಾಹರಣೆಗಾಗಿ :—ಆತನು ಯಾವ ತರಹದ ಮನೆಯನ್ನು ಕಟ್ಟುತ್ತಾನೆ ಎಂಬುದು ಗಣನೀಯವೇ ; ಆತನು ಆದಾಯ ತೆರಿಗೆಯನ್ನು ಪಾವತಿ ಮಾಡುತ್ತಾನೋ ಎಂಬುದು ಗಣನೀಯವೇ ? ಆತನು ಮತ್ತೊಂದು ದೇಶಕ್ಕೆ ಹೋಗುವುದು ಗಣನೀಯವೇ ? ಹೌದು, ಅದು ಗಣನೀಯವಾಗುತ್ತದೆ. ತಾನು ಬದ್ಧನಾಗಿರಬೇಕಾದ ಕಾನೂನುಗಳಿವೆಯೆಂದು ತಿಳಿದುಕೊಳ್ಳುತ್ತಾನೆ. ತಾನೇ ಯಾವ ರೀತಿಯ ಮನೆಯನ್ನು ಕಟ್ಟಲೂ ಸಾಧ್ಯವಿಲ್ಲ ಅಥವಾ ತನಗೆ ಇಷ್ಟ ಬಂದ ಜಾಗದಲ್ಲಿ ಅದನ್ನಿಡಲು ಸಾಧ್ಯವಿಲ್ಲ. ಆತನು ತೆರಿಗೆಯನ್ನು ಕಟ್ಟಲೇಬೇಕು. ಏಕೆಂದರೆ ಅದು ಆ ದೇಶದ ಕಾನೂನು ಮತ್ತು ಆತನು ಕಾಯಿದೆಗಳನ್ನು ಅನುಸರಿಸದೆ ತನ್ನ ದೇಶವನ್ನು ಬಿಡಲಾರನು. ಆದ್ದರಿಂದ ದಿನನಿತ್ಯದ ವ್ಯವಹಾರಗಳಲ್ಲಿ ನಾವು ಏನನ್ನು ನಂಬುತ್ತೇವೆಂಬುದು ಗಣನೀಯವಾದದ್ದು (ಪ್ರಾಮುಖ್ಯ).

ಆತ್ಮೀಕ ವಿಷಯಗಳ ಕ್ಷೇತ್ರದಲ್ಲಿ ಇದು ಅಪಾರವಾಗಿ, ಅತಿ ಪ್ರಾಮುಖ್ಯವಾದುದು. ಇಲ್ಲಿ ಪುನಃ ಕೆಲವು ನಿಯಮಗಳಿವೆ. ದೇವರು ಕೊಟ್ಟ ಆಜ್ಞೆಗಳು ಯಾವ ವಿಷಯಗಳಲ್ಲಿ ಸರಿಯಾದವುಗಳೋ, ಯಾವ ವಿಷಯಗಳು ಸತ್ಯವಾದವೋ ಮತ್ತು ನಿತ್ಯ ಜೀವಕ್ಕೆ ಯಾವ ವಿಷಯಗಳು ಅವಶ್ಯವೋ ಅಂಥವುಗಳಲ್ಲಿ ನಂಬಿಕೆ ಇಡಬೇಕೆಂದು ನಾವು ಆಜ್ಞಾಪಿಸಲ್ಪಟ್ಟಿದ್ದೇವೆ. ಕರ್ತನಾದ ಯೇಸು ಕ್ರಿಸ್ತನು ಹೇಳಿದ್ದಾನೆ, "ನಿತ್ಯ ಜೀವಕ್ಕೆ ಹೋಗುವ ಬಾಗಿಲು ಇಕ್ಕಟ್ಟು, ದಾರಿ ಬಿಕ್ಕಟ್ಟು, ಅದನ್ನು ಕಂಡು ಹಿಡಿಯುವವರು ಕೆಲವರು," (ಮತ್ತಾಯ 7:14). ಬಾಬಿಲೋನಿನ ಅಂತ್ಯ ದಿನಗಳ

ನ್ಯಾಯ ತೀರ್ಪನ್ನು ಕುರಿತ ಪ್ರಕಟನೆಯು ತಿಳಿಸಿರುವಂತೆ ಲೋಕದ ಬಹುಪಾಲು ಜನರು ಜೀವದ ಮಾರ್ಗವನ್ನು ಕಂಡುಕೊಳ್ಳುವುದಿಲ್ಲ. ಅದರ ಬಗ್ಗೆ ನಾವು ಓದುತ್ತೇವೆ: "ನಿನ್ನ ಮಾಟದಿಂದ ಎಲ್ಲಾ ಜನಾಂಗದವರೂ ಮರುಳಾದರು." ಮೀಕನ ಅದ್ಭುತ ಪ್ರವಾದನೆಯಲ್ಲಿ ನಾವು ಇದನ್ನು ಓದುತ್ತೇವೆ. "ಅನೇಕ ಜನಾಂಗಗಳವರು ಬಂದು ಹೇಳುವುದೇನೆಂದರೆ–ಬನ್ನಿರಿ ಯೆಹೋವನ ಪರ್ವತಕ್ಕೆ, ಯಾಕೋಬನ ದೇವರ ಮನೆಗೆ ಏರಿ ಹೋಗುವ- ಅವನು ತನ್ನ ಮಾರ್ಗಗಳನ್ನು ನಮಗೆ ಬೋಧಿಸುವನು" (ಮೀಕ 4:2) ನಿಸ್ಸಂಶಯವಾಗಿ ಜನಾಂಗದವರು ಇಂದು ಆತನ ಮಾರ್ಗಗಳನ್ನು ತಿಳಿದಿದ್ದರೆ ಅವರಿಗೆ ನಂತರ ತಿಳಿಯಪಡಿಸಬೇಕಾಗಿರಲಿಲ್ಲ. ಆದುದರಿಂದ ಇಸ್ರಾಯೇಲಿನ ನಿರೀಕ್ಷೆಯನ್ನು ನಂಬುವವರಾದ ಅಲ್ಪಸಂಖ್ಯಾತರಲ್ಲಿ ನೀನಿದ್ದರೂ ಚಿಂತಿಸಬೇಡ.

ಹೌದು, ನಾವು ಏನನ್ನು ನಂಬುತ್ತೇವೆಂಬುದು ಪ್ರಾಮುಖ್ಯವಾದದ್ದು (ಗಣನೀಯ.) "ನೀವು ಹೇಗೂ ಸಾಯುವುದಿಲ್ಲ" (ಆದಿ 3:4) ಎಂಬ ಸರ್ಪದ ಸುಳ್ಳು ಮಾತನ್ನು ನಂಬಿದಾಗ, ಆದಾಮ ಮತ್ತು ಹವ್ವಳಿಗೂ ಅದು ಗಣನೀಯವಾಯಿತು. ಅಂದಿನಿಂದಲೂ ಪ್ರಸಂಗಿಸುವ ಸಾವಿರಾರು ಬೋಧಕರು ನೀವು ಹೇಗೂ ಸಾಯುವುದಿಲ್ಲ ಎಂಬ ಮಾತನ್ನು ಪುನರಾವೃತ್ತಿ ಮಾಡಿದ್ದಾರೆ.

ದೇವರ ಒಬ್ಬ ಪ್ರವಾದಿಗೆ ಕಿವಿಗೊಡುವುದರ ಬದಲು ತನ್ನ ಕಾಲದ ಸುಳ್ಳು ಪ್ರವಾದಿಗಳ ಮಾತನ್ನು ನಂಬಿದ ಇಸ್ರಾಯೇಲ್ಯರ ಅರಸನಾದ ಅಹಾಬನಿಗೆ ನಿಶ್ಚಯವಾಗಿಯೂ ಅದು ಗಣನೀಯವಾಯಿತು, ಅವನು ತತ್ಪರಿಣಾಮವಾಗಿ ತನ್ನ ಜೀವವನ್ನೇ ಕಳೆದುಕೊಂಡನು. (1 ಅರಸು 22)

ಯೆರೂಸಲೇಮಿನ ಮುತ್ತಿಗೆಯ ಸಮಯದಲ್ಲಿ ಇಸ್ರಾಯೇಲ್ಯರ ಕಡೆಯ ರಾಜನಾದ ಚಿದಕೀಯನು ಸಹ ದೇವರ ಪ್ರವಾದಿಯಾದ ಯೆರೆಮೀಯನ ಮಾತಿಗೆ ಕಿವಿಗೊಡದೆ ಯೆಹೂದ್ಯರ ಮುಖ್ಯಸ್ಥರ ಮಾತಿಗೆ ಕಿವಿಗೊಟ್ಟಾಗ ಅದು ಗಣನೀಯವಾಯಿತು. ಅವನು ಘೋರವಾದ ಶಿಕ್ಷೆ ಹೊಂದಿದನು (2 ಅರಸು 25:7), ಹೌದು, ಒಬ್ಬನು ಏನನ್ನು ನಂಬುತ್ತಾನೆಂಬುದು ನಿಶ್ಚಯವಾಗಿ ಗಣನೀಯವಾದದ್ದು, ವಿಷದಿಂದ ಕೂಡಿದ ಸೀಸೆಯನ್ನು ಹಣ್ಣಿನ ರಸವೆಂದು ತಪ್ಪಾಗಿ ಭಾವಿಸಿ ಕುಡಿದಂತೆಯೇ

ಭೂಲೋಕಕ್ಕೆ ಕ್ರಿಸ್ತನು ಬರುತ್ತಾನೆಯೇ ? ಇದನ್ನು ತಿಳಿಯಬೇಕಾದಲ್ಲಿ "ಭೂಲೋಕಕ್ಕೆ ಕ್ರಿಸ್ತನ ವಾಸ್ತವ ಹಿಂದಿರುಗುವಿಕೆ" ಎಂಬ ಉಚಿತ ಪುಸ್ತಕಕ್ಕೆ ಬರೆಯಿರಿ.

ಆದು. ಆದರೆ ಪರಿಣಾಮ ಮರಣವಾಗಿದೆ, ಮತ್ತೆ ಪುನಹ ಅನೇಕರು ನಾನು ಒಳ್ಳೆಯ ಜೀವನವನ್ನು ನಡೆಸುತ್ತೇನೆ. ನಾನು ಯಾರನ್ನೂ ತೊಂದರೆ ಪಡಿಸುವುದಿಲ್ಲ, ನಾನು ಸದಾ ನನ್ನ ನೆರೆಯವರಿಗೆ ಒಳ್ಳೆಯದನ್ನೇ ಮಾಡುತ್ತೇನೆ ಮತ್ತು ನಾನು ಕೊಡುವುದನ್ನೆಲ್ಲಾ ಕೊಡುತ್ತೇನೆ, ಇನ್ನಾರಿಗಿಂತಲೂ ನಿತ್ಯಜೀವ ಪಡೆಯಲು ನನಗೆ ಒಳ್ಳೆಯ ಅವಕಾಶವಿದೆ ಎಂದು ನಾನು ಊಹಿಸುತ್ತೇನೆ. ಮಿತ್ರ ಓದುಗನೇ, ಆ ಮಟ್ಟವು ಒಳ್ಳೆಯದೇ ? ಆದರೆ ಸಾಕಷ್ಟು ಒಳ್ಳೆಯದಲ್ಲ. ಶತಾಧಿಪತಿಯಾದ ಕೊರ್ನೇಲ್ಯನು ಒಳ್ಳೆಯ ಮನುಷ್ಯನಾಗಿದ್ದನು. ಅವನು ಒಳ್ಳೆಯ ಜೀವನವನ್ನು ನಡೆಸುತ್ತಿದ್ದನು. ಆದರೆ ಅದು ಸಾಲದಾಗಿತ್ತು, ಜೀವದ ಮಾರ್ಗವನ್ನು ಅವನಿಗೆ ತೋರಿಸಲು ಪೇತ್ರನ ಬಳಿಗೆ ಕಳುಹಿಸಬೇಕಾಯಿತು. ದೇವರು ಹೇಳಿದ್ದು : "ಅವನು ನೀನು ಮಾಡಬೇಕಾದದ್ದೇನೆಂದು ನಿನಗೆ ಹೇಳುವನು." (ಅ ಕೃ. 10:6).

ಈಗ ಮಿತ್ರ ಓದುಗನೇ, ನೀನು ಒಬ್ಬ ವಿವೇಚನೆಯುಳ್ಳ ವ್ಯಕ್ತಿಯಾದರೆ ಮಾನವ ಮಟ್ಟವು ದೇವರ ಮೆಚ್ಚಿಕೆಯನ್ನು ಪಡೆಯಲು ಸಾಕಾಗುವುದಿಲ್ಲ. ಎಂಬುದನ್ನು ಮನಗಾಣುವಿ. ಅಲ್ಲಿ ದೈವಿಕ ಅಗತ್ಯಗಳಿವೆ. ಕೇವಲ ಒಂದು ಉತ್ತಮವಾದ ಬಾಳನ್ನು ಬದುಕುವುದರಿಂದಲೇ ರಕ್ಷಣೆಗೆ ಸಾಕಷ್ಟಾಗುವುದಾದರೆ, ಸುವಾರ್ತೆಯಿಂದ ಜೀವವನ್ನೂ ನಿರ್ಲಯತ್ವವನ್ನೂ ಬೆಳಕಿಗೆ ತರಲು ಶಿಲುಬೆಯ ಮೇಲೆ ಪ್ರಾಣ ಬಿಡಲು ತನ್ನ ಒಬ್ಬನೇ ಮಗನನ್ನು ಕಳುಹಿಸುವ ಅವಶ್ಯಕತೆ ದೇವರಿಗೆ ಯಾಕಿತ್ತು ?

ಯೇಸು ಕ್ರಿಸ್ತನು ಬರುವುದಕ್ಕೆ ಹಿಂದಿನ 4000 ವರ್ಷಗಳಲ್ಲಿ ಅನೇಕರು ಉತ್ತಮವಾದ ಜೀವಿತವನ್ನು ನಡೆಸಿದ್ದರು. ಆದರೆ ಒಳ್ಳೆಯ ಜೀವಿತವೇ ನಿತ್ಯಜೀವವನ್ನು ಹೊಂದಲು ಸಾಕಾಗಿದ್ದ ಪಕ್ಷದಲ್ಲಿ ಯೇಸುವಿನ ಶ್ರಮೆ ಮತ್ತು ಬಲಿಯು ದುರಂತ ಪ್ರಮಾದವಾಗುತ್ತದೆ. ಆದರೆ ಇಲ್ಲ, ದೇವರು ಯೇಸುವನ್ನು ಕಳುಹಿಸುವುದರಲ್ಲಿ ತಪ್ಪು ಮಾಡಿಲ್ಲ. ರಕ್ಷಣೆಯು ಇತರೇ ಎಲ್ಲಾ ಮಾನವ ಬದಲಿಗಳನ್ನು ಆತನು ಮಹತ್ತರವಾದ ಒಂದೇ ವಾಕ್ಯದಲ್ಲಿ ತಳ್ಳಿಹಾಕಿ ಪವಿತ್ರಾತ್ಮ ಭರಿತನಾದ ಪೇತ್ರನ ಮೂಲಕ ಈ ರೀತಿ ಹೇಳುತ್ತಾನೆ. "ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ." (ಅ ಕೃ 4:12].

ಅಂಜೂರದ ಎಲೆಗಳ ಹೊದಿಕೆಗಳಾಗಲೀ ಮತ್ತು ಇತರೇ ರಕ್ಷಣಾ ಮಾರ್ಗಗಳಾಗಲೀ ಪ್ರಯೋಜನಕ್ಕೆ ಬಾರದವುಗಳಾಗಿವೆ. ಆದರೆ ದಮಸ್ಕಕ್ಕೆ ಹೋಗುವ ಮಾರ್ಗದಲ್ಲಿ ದಂಡಿಸಲ್ಪಟ್ಟಾಗ, "ಕರ್ತನೇ, ನಾನು ಏನು ಮಾಡಬೇಕೆಂದು ಇಚ್ಛಿಸುತ್ತೀ" ಎಂದು ಕೇಳಿದ ಪೌಲನ ಹಾಗೆ ನಮಗೆ ನಿಜಭಾವನೆ ಇರಬೇಕು. (ಅ.ಕೃ. 9:6).

ಯಾವೊಬ್ಬ ತಿಳುವಳಿಕೆಯುಳ್ಳ ಮನುಷ್ಯನೂ ವಿಚಾರಣೆ, ಆದೇಶ, ಸಲಹೆಗಳಿಲ್ಲದೆ ಒಂದು ಮುಖ್ಯ ಸ್ಥಾನವನ್ನು ಪಡೆಯುವ ಯೋಚನೆ ಮಾಡುವುದಿಲ್ಲ. ಮತ್ತು

ಭಾಗವಹಿಸಬೇಕಾದ ಯಾವೊಬ್ಬ ವಿವೇಚನೆಯುಳ್ಳ ವ್ಯಕ್ತಿಯೂ ಪ್ರವೇಶಿಯಾಗಿ ಮೊದಲು ತನ್ನ ಹೆಸರನ್ನು ನೋಂದಾಯಿಸದೆ ಸ್ಪರ್ಧೆಯ ನೀತಿ ನಿಯಮಗಳನ್ನು ಓದಿ, ಅವುಗಳಿಗೆ ಬದ್ಧನಾಗಿರಲು ತಿಳಿಯದೆ. ಒಪ್ಪದೆ ಯಾವುದೇ ವ್ಯಾಯಾಮ ಸ್ಪರ್ಧೆ ಅಂದರೆ ಒಲಂಪಿಕ್ ಮುಂತಾದ ಸ್ಪರ್ಧೆಗಳಲ್ಲಿ ಭಾಗವಹಿಸಲಿಚ್ಛಿಸುವುದಿಲ್ಲ. ಹಾಗಿದ್ದಲ್ಲಿ ಈ ವಿಶಾಲವಾದ ಮಹತ್ತರವಾದ ಜನಾಂಗಕ್ಕೆ ನಿತ್ಯಜೀವದ ಬಗ್ಗೆ ಅದಕ್ಕಾಗಿ ದೇವರು ಇಟ್ಟಿರುವ ನಂಬಿಕೆ ಮತ್ತು ನಿರೀಕ್ಷೆಗಳ ಅತ್ಯಗತ್ಯವಾದ ತಳಹದಿ ಏನೆಂಬುದನ್ನು ತಿಳಿಯುವುದು ಅವಶ್ಯವಲ್ಲವೇ ?

ಈ ಕೆಳಗೆ ನಾವು ಕೆಲವು ಪ್ರಖ್ಯಾತ ಪ್ರಾಸಂಗಿಕ ಬೋಧನೆಗಳೊಡನೆ ಹೋಲಿಸುವುದರ ಮೂಲಕ ಇವುಗಳನ್ನು ತಿಳಿಸುವವರಾಗಿದ್ದೇವೆ.

## 1. ಸತ್ಯವೇದ

**ಜನ ಸಾಮಾನ್ಯರ ನಂಬುಗೆ :**—ಸತ್ಯವೇದವು ದೈವಪ್ರೇರಿತವಾದುದಲ್ಲ. ಅಥವಾ ಭಾಗಶಃ ಮಾತ್ರ ಆಗಿರಬಹುದು. ಕೆಲವು ಭಾಗಗಳು ಓದಲು ಅನರ್ಹವಾದಿವೆ. ಮುಂಚಿನ ಅಧ್ಯಾಯಗಳು ಅಸತ್ಯವಾದವು ಅಥವಾ ಪ್ರಾಚೀನ ಯೆಹೂದ್ಯರ ಊಹಾಪೋಹ (ಕಲ್ಪನೆ)ಗಳ ಅವಶೇಷವಾಗಿದೆ.

**ಸತ್ಯ ವಿಚಾರ :**—ಬರಹವೆಲ್ಲಾ ದೈವಪ್ರೇರಿತವಾಗಿ ಕೊಡಲ್ಪಟ್ಟದೆ. (2ತಿಮೋ 3:16) ದೇವರ ಪರಿಶುದ್ಧ ಮನುಷ್ಯರು ಪರಿಶುದ್ಧಾತ್ಮದಿಂದ ಪ್ರೇರೇಪಿಸಲ್ಪಟ್ಟು ಮಾತಾಡಿದರು. (2 ಪೇತ್ರ 1:21)

ಮೋವಾಬ್ ದೇಶದಲ್ಲಿ ಇತ್ತೀಚಿಗೆ ಸಿಕ್ಕಿದ ಪ್ರಾಚೀನ ಹಸ್ತಪ್ರತಿಗಳು ಅವು ಯೇಸುವಿಗಿಂತಲೂ ಅನೇಕ ವರ್ಷಗಳ ಹಿಂದಿನವುಗಳೆಂಬುದನ್ನು ಕಂಡುಹಿಡಿದಿರುವುದರಿಂದ ಅವು ಸತ್ಯವೇದದ ಪ್ರಾಮಾಣ್ಯವನ್ನು ದೃಢಪಡಿಸುತ್ತದೆ.

## 2. ಒಬ್ಬನೇ ದೇವರು

ಜನಸಾಮಾನ್ಯರ ನಂಬುಗೆ:—ದೇವರು ಎಂದೆಂದಿಗೂ ಇರುವ ಸಹ–ಸಮಾನತೆ ಮತ್ತು ಸಹ-ನಿಂರತರತೆಯುಳ್ಳ ಮೂರು ಸಮನಾದ ದೇವರುಗಳ ತ್ರಯೈಕವಾಗಿದ್ದಾನೆ.

ಸತ್ಯ ವಿಚಾರ:- ದೇವರ ವಾಕ್ಯವು ಹೇಳುತ್ತದೆ. "ಇಸ್ರಾ–ಯೇಲ್ಯರೇ ಕೇಳಿರಿ, ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು" (ಧರ್ಮೋ6:4). ಮತ್ತು ಯೇಸುವು ಇದೇ ಮಾತನ್ನು (ಮಾರ್ಕ 12:29) ಪುನರುಚ್ಚರಿಸಿದ್ದಾನೆ. "ನನ್ನ ಹೊರತು ಯಾರೂ ಇಲ್ಲ. ನಾನೇ, ಯೆಹೋವನು. (ಯೆಶಾಯ 45:6,21;22) ನಾನೇ, ನಾನೊಬ್ಬನೇ ದೇವರಾದಿರಲಾಗಿ ನನ್ನ ವಿನಾ ಯಾವ ದೇವರೂ ಇಲ್ಲ.

(ಧರ್ಮೋ 32;39) "ದೇವರೊಬ್ಬರೇ ಹೊರತು ಒಳ್ಳೆಯವನು ಯಾವನೂ ಇಲ್ಲ" (ಮತ್ತಾ 19:17)

"ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ, ನೀನು ಕಳುಹಿಸಿಕೊಟ್ಟ ಯೇಸು ಕ್ರಿಸ್ತನನ್ನೂ ತಿಳಿಯುವುದೇ ನಿತ್ಯಜೀವವು" (ಯೋಹಾನ 17:3).

## 3. ಯೇಸು ದೇವರ ಮಗನು—ಮಗನಾದ ದೇವರು ಅಲ್ಲ.

ಜನ ಸಾಮಾನ್ಯರ ನಂಬುಗೆ : ಯೇಸುವು ಮೂರು ದೇವರುಗಳ ದೇವರಿಗೆ ಸರಿಸಮನಾದ ಎರಡನೆಯ ವ್ಯಕ್ತಿಯಾಗಿದ್ದಾನೆ ಮತ್ತು ನಿಶ್ಚಯವಾಗಿಯೂ ದೇವರೇ ಆಗಿದ್ದಾನೆ.

ಸತ್ಯ ವಿಚಾರ :—ಯೇಸುವು ದೇವರ ಮಗನಾಗಿದ್ದಾನೆಂದು ಮತ್ತು ಒಬ್ಬನೇ ಮಗನಾಗಿದ್ದಾನೆಂದು ದೇವರ ವಾಕ್ಯವು ಸ್ಪಷ್ಟವಾಗಿ ಹೇಳುತ್ತದೆ. ಆದ್ದರಿಂದ ಪಿತೃತ್ವ ಹಾಗೂ ಪುತ್ರತ್ವವು ಏಕಕಾಲದಲ್ಲಿ ಜೊತೆಯಲ್ಲಿದ್ದು ಅಸ್ತಿತ್ವದಲ್ಲಿರುವುದಿಲ್ಲವೆಂಬುದು ಸ್ಪಷ್ಟವಾಗಿದೆ. ಯೇಸುವು ಹೇಳಿರುವುದನ್ನು ಕೇಳಿರಿ, "ನನ್ನ ತಂದೆಯು ನನಗಿಂತ ದೊಡ್ಡವನು ಮತ್ತು ನನ್ನಷ್ಟಕ್ಕೆ ನಾನೇ ಏನೂ ಮಾಡಲಾರೆನು." (ಯೋಹಾನ 14:28;5:30). "ದೇವರೊಬ್ಬನೇ ಹೊರತು ಒಳ್ಳೆಯವನು ಯಾವನೂ ಇಲ್ಲ." (ಮತ್ತಾ 19:17) "ನನ್ನ ದೇವರೇ ನನ್ನ ದೇವರೇ ಏಕೆ ನನ್ನನ್ನು ಕೈಬಿಟ್ಟದ್ದೀ ?" (ಮತ್ತಾಯ 27:46) "ಮಗನಾದಾಗ್ಯೂ ತಾನು ಪಟ್ಟ ಶ್ರಮಗಳಿಂದ ವಿಧೇಯತ್ವವನ್ನು ಕಲಿತುಕೊಂಡನು." (ಇಬ್ರಿ 5:8).

ಯಾಕೆಂದರೆ ಯೇಸುವಿನ ಪಾಪರಹಿತ ಜೀವನದಿಂದಲೂ ಮತ್ತು ಆತನ ವಿಧೇಯತೆಯಿಂದಲೂ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ, ಎಂಬುದನ್ನು ಓದುತ್ತೇವೆ. (ಫಿಲಿಪಿ 2:9).

ಯೇಸುವು ಸರಿಸಮಾನನೂ ಮತ್ತು ಸಹ-ಅಮರನೂ ಆಗಿದ್ದು ತ್ರಯ್ಯೈಕ ದೇವರುಗಳಿಗೆ ಎಂದೆಂದಿಗೂ ಸಮಾನನಾದ ಎರಡನೆಯ ವ್ಯಕ್ತಿಯಾಗಿದ್ದ ಪಕ್ಷದಲ್ಲಿ, ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಲಾಗುತ್ತಿರಲಿಲ್ಲ ಎಂಬುದು ಸ್ಪಷ್ಟವಾಗಿದೆ. ಆದ್ದರಿಂದ ಯೇಸುವು ದೇವರ ಮಗನಾಗಿದ್ದಾನೆ. ಅದ್ಭುತನಾದ ರಕ್ಷಕನೂ ಈಗ ಒಬ್ಬ ಮಧ್ಯಸ್ಥಗಾರನೂ ಆಗಿದ್ದು ಮತ್ತು ಶೀಘ್ರದಲ್ಲಿ ಭೂಲೋಕಕ್ಕೆಲ್ಲಾ ಅಧಿಪತಿಯಾಗುವವನಾಗಿದ್ದಾನೆ.

## 4. ಪವಿತ್ರಾತ್ಮ

ಸಾಮಾನ್ಯರ ನಂಬುಗೆ :—ಪವಿತ್ರಾತ್ಮವು ಸಹ–ಸಮಾನ ಮತ್ತು ಅಮರತ್ವವುಳ್ಳ—ಒಬ್ಬ ತ್ರಯ್ಯೈಕ ದೇವರ ಮೂರನೇ ವ್ಯಕ್ತಿಯಾಗಿದ್ದಾನೆ.

ಸತ್ಯ ವಿಚಾರ :—ಪವಿತ್ರಾತ್ಮವು ಮತ್ತೊಬ್ಬ ದೇವರು ಎಂದಾಗಲಿ ಅಥವ ದೇವರಿಗೆ ಸರಿಸಮಾನವಾದ ದೇವರೆಂದಾಗಲಿ ದೇವರ ವಾಕ್ಯದಲ್ಲಿ ಎಲ್ಲಿಯೂ ಇಲ್ಲ. ಪವಿತ್ರಾತ್ಮವು ದೇವರ ಶಕ್ತಿಯಾಗಿದೆ. ಆತನು ಕಾರ್ಯ ನಡೆಸುವ ಒಂದು ಅದ್ಭುತ ಶಕ್ತಿಯಾಗಿದ್ದು ಕೆಲವು ವಿಶೇಷ ಕಾರ್ಯಗಳನ್ನು ನಡೆಸಲು ಇತರರ ಮೇಲೆ ಅನುಗ್ರಹಿಸುವ ಶಕ್ತಿಯಾಗಿದೆ.

ಉದಾಹರಣೆಗೆ :—ದೇವರಾತ್ಮವು ಜಲಸಮೂಹಗಳ ಮೇಲೆ ಚಲಿಸುತ್ತಿತ್ತು. (ಆದಿ 1:2)

"ದೇವರು ಯೇಸುವನ್ನು ಪವಿತ್ರಾತ್ಮದಿಂದ ಅಭಿಷೇಕಿಸಿದನು (ಅಕೃ 10:38).

"ನಿನ್ನ ಮೇಲೆ ಪವಿತ್ರಾತ್ಮ ಬರುವುದು ; ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವುದು" (ಲೂಕ 1:35), "ಮನುಷ್ಯರು ಪವಿತ್ರಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು" (2 ಪೇತ್ರ 1:21)

ಹಾಗೂ ಯೋಬ 26;18, ಕೀರ್ತನೆ 104:30 ; ಕೀರ್ತನೆ 1:8 ಇವುಗಳನ್ನು ನೋಡಿರಿ.

## 5. ಮನುಷ್ಯ—ಮರಣದಲ್ಲಿ ಏನನ್ನು ತಿಳಿಯುವುದಿಲ್ಲ.

ಜನಸಾಮಾನ್ಯರ ನಂಬುಗೆ :—ಮರಣವೆಂಬುವುದೊಂದು ಇಲ್ಲ. ಮನುಷ್ಯನು ಪರಲೋಕದಲ್ಲಾಗಲೀ ಅಥವಾ ನರಕ ಯಾತನೆಯಲ್ಲಾಗಲೀ ಮುಂದುವರಿಯುತ್ತಾನೆ. ಅಲ್ಲಿ ತನ್ನ ಅಮರವಾದ ಆತ್ಮವು ತನ್ನ ಎಲ್ಲಾ ಸ್ವಾಭಾವಿಕ ಶಕ್ತಿಯನ್ನು ಹೊಂದಿರುತ್ತದೆ. ಐಗುಪ್ತ್ಯರು ಆತ್ಮದ ಅಮರತ್ವದ ಬಗ್ಗೆ ನಂಬಿಕೆಯುಳ್ಳವರಾಗಿದ್ದರು. ಮತ್ತು ಪ್ಲೇಟೋ ಮುತ್ತಿತರರು ಈ ತತ್ವವನ್ನು ಮುಂದುವರೆಸಿಕೊಂಡು ಹೋದರು.

ಆದರೆ ಐಗುಪ್ತ್ಯರ ರಾಜನಾದ ಟುಟ್ಟುಂಕ ಮೆನ್ನನ ಶವವನ್ನು ಪತ್ತೆ ಹಚ್ಚಿದಾಗ ಅವನು ಸತ್ತಾಗ ಅವನಿಗೆ ತಿನ್ನಲೆಂದು ದೇಹದ ಜೊತೆಗೆ ಇಟ್ಟಿದ ಆಹಾರ ಪದಾರ್ಥಗಳು ತಿನ್ನಲ್ಪಡದೆ ಹಾಗೆಯೇ ಇತ್ತು. ಇದರ ಬಗ್ಗೆ ವ್ಯಾಖ್ಯಾನ ಅನಗತ್ಯ.

ಸತ್ಯ ವಿಚಾರ :—ದೇವರ ವಾಕ್ಯವು ಹೀಗೆ ಹೇಳುತ್ತದೆ : "ಜೀವಿತರಿಗೆ ಸಾಯುತ್ತೇವೆಂಬ ತಿಳುವಳಿಕೆ ಉಂಟಷ್ಟೆ, ಸತ್ತವರಿಗೋ ಯಾವ ತಿಳುವಳಿಕೆಯೂ ಇಲ್ಲ. (ಪ್ರಸಂಗಿ 9:5)

ಅವನ ಉಸಿರು ಹೋಗಲು ಮಣ್ಣಿಗೆ ಸೇರುತ್ತಾನೆ. (ಕೀ 146:4) "ಅಲ್ಲಿ ಸಮಾಧಿಯಲ್ಲಿ ದುಷ್ಟರ ಆಗ್ರಹವು ಅಣಗಿಹೋಗುವುದು. ದಣಿದವರು ದಣಿವಾರಿಸಿಕೊಳ್ಳುವರು. (ಯೋಬ 3:17).

"ಅಮರ ಆತ್ಮ" ಅಥವಾ "ಎಂದಿಗೂ ಸಾಯದ ಆತ್ಮ ಎಂಬ ಪದಗಳು ಇಡೀ ಸತ್ಯವೇದದಲ್ಲಿ ಒಮ್ಮೆಯಾದರೂ ಕಂಡುಬಂದಿಲ್ಲ. ಆತನು ಮಾಡಿದ ಅನೇಕ ಉಲ್ಲೇಖ ಗಳಲ್ಲಿ ಯೇಸುವು ಸತ್ತವರನ್ನು ಸಮಾಧಿಯಲ್ಲಿರುತ್ತಾರೆಯೇ ಹೊರತು "ಪರಲೋಕ ದಲ್ಲಲ್ಲ" ಎಂಬುದು ಸ್ಪಷ್ಟವಾಗಿದೆ ಅವು ಯಾವುವೆಂದರೆ :—

"ನಾನು ಅವನನ್ನು ಕಡೇ ದಿನದಲ್ಲಿ ಎಬ್ಬಿಸುವೆನು." (ಯೋಹಾನ 6:44), ಆತನು ಮತ್ತೂ ಹೇಳುತ್ತಾನೆ, "ಆದಕ್ಕೆ ಆಶ್ಚರ್ಯಪಡಬೇಡಿರಿ. ಸಮಾಧಿಗಳಲ್ಲಿರುವವ ರೆಲ್ಲರೂ ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ." (ಯೋಹಾನ 5:28). ಸಮಾಧಿಗಳಲ್ಲಿರುವವರು ಆತನ ಧ್ವನಿಯನ್ನು ಕೇಳುವವರೇ ಹೊರತು ಪರಲೋಕದಲ್ಲಿರುವವರಲ್ಲ ಎಂಬುದನ್ನು ಗಮನಿಸಬೇಕು.

## 6. ಮನುಷ್ಯನು ಪರಲೋಕಕ್ಕೆ ಹೋಗಲಾರನು

**ಜನ ಸಾಮಾನ್ಯರ ನಂಬುಗೆ :** ನೀತಿವಂತನು ಪರಲೋಕಕ್ಕೆ ಒಯ್ಯಲ್ಪಡುವನು ಮತ್ತು ತಕ್ಷಣವೇ ನಿತ್ಯ ಜೀವವನ್ನು ಪಡೆದುಕೊಳ್ಳುವನು.

**ಸತ್ಯ ವಿಚಾರ :**—ದೇವರ ವಾಕ್ಯವು ಹೀಗೆ ಹೇಳುತ್ತದೆ– (ದೇವರು ಮೆಚ್ಚಿದ ಒಬ್ಬ ಮನುಷ್ಯನ ಬಗ್ಗೆ) ದಾವೀದನು ಆಕಾಶಕ್ಕೆ ಏರಿಹೋಗಲಿಲ್ಲವಲ್ಲಾ, ಆದರೆ ಆತನ ಸಮಾಧಿಯು ಈ ದಿನದವರೆಗೂ ನಮ್ಮಲ್ಲಿ ಅದೆ (ಅ.ಕೃ 2:29,34). 1 ಕೊರಿಂಥ 15 : 20ರಲ್ಲಿ, "ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ. ನಿದ್ರೆ ಹೋದವರಲ್ಲಿ ಪ್ರಥಮ ಫಲವಾದನು" ಎಂಬುದನ್ನು ಓದುತ್ತೇವೆ. ಫಲಗಳಲ್ಲಿ ಆತನೇ ಪ್ರಥಮ ಫಲವಾದರೆ ಹಿಂದಿನ 4000 ವರ್ಷಗಳಲ್ಲಿ ಮತ್ತಾರೂ ಪರಲೋಕಕ್ಕೆ ಹೋಗಿಲ್ಲ ಹಾಗೂ (ಯೋಹಾ 3:13)ರಲ್ಲಿ "ಮನುಷ್ಯರಲ್ಲಿ ಯಾರೂ ಪರಲೋಕಕ್ಕೆ ಏರಿಹೋಗಿಲ್ಲ." ಅಲ್ಲದೆ ಪರಲೋಕವು ಯೆಹೋವನದು ಆದರೆ ಭೂಲೋಕವನ್ನು ವರಸಂತಾನಕ್ಕೆ ಕೊಟ್ಟಿದ್ದಾನೆ (ಕೀರ್ತನೆ 115:16)

## 7. ಒಂದು ಪುನರುತ್ಥಾನವಿದೆ—ಏಕೆ?

**ಜನ ಸಾಮಾನ್ಯರ ನಂಬುಗೆ :**—ಅನೇಕರು ಅತಿ ವಿಚಿತ್ರವಾಗಿ ಬೋಧಿಸುತ್ತಾರೆ. ಅಮರತ್ವ—ಆತ್ಮ—ದೇಹ ಇವುಗಳನ್ನು ಯೇಸುವಿನ ಬರುವಿಕೆಯಲ್ಲಿ ಸ ಮಾ ಧಿ ಯ ದೇಹವನ್ನು ಕೂಡಿಕೊಳ್ಳುತ್ತದೆ ಎಂದು ಬೋಧಿಸುತ್ತಾರೆ, ಆದರೆ ಏತಕ್ಕಾಗಿ ? ಅವರಿಗೆ ಗೊತ್ತಿಲ್ಲ ! ಮೊದಲು ತೀರ್ಪನ್ನು ಜಾರಿಗೆ ಮಾಡಿದ ಮೇಲೆ (ನಿತ್ಯಜೀವವಾಗಲಿ ಅಥವಾ ಹಿಂಸೆಯಾಗಲಿ) ಆ ತೀರ್ಪನ್ನು ದೃಢೀಕರಿಸಿಕೊಳ್ಳಲೋಸುಗ ಆ ವ್ಯಕ್ತಿಯನ್ನು ಪುನಃ ಹಿಂದಕ್ಕೆ ಕರೆತರುವ ಒಂದು ಗೊಂದಲದ ಕಾರ್ಯವಿಧಾನವನ್ನು ಅವರು ವಿವರಿಸಲಾರರು,

ಇದು ಐಗುಪ್ತರ ಮತ್ತು ಬ್ಯಾಬಿಲೋನಿಯನ್ನರಲ್ಲಿ ಅಡಗಿರುವ ಮೂಢನಂಬಿಕೆಯಿಂದ ಬಂದ ಹಾಗೂ ಗೊಂದಲದ ಅತ್ಯಂತ ಗಣನೀಯವಾದ ನಿದರ್ಶನವಾಗಿದೆ.

**ಸತ್ಯ ವಿಚಾರ** :–ದೇವರ ವಾಕ್ಯವು ಹೀಗೆ ಹೇಳುತ್ತದೆ "ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ (ಯೋಹಾನ 11:25) ; "ಸಮಾಧಿಗಳಲ್ಲಿರುವವರೆಲ್ಲರೂ ಆತನ ಧ್ವನಿಯನ್ನು ಕೇಳುವರು. '(ಯೋಹಾನ 5:28)"

"ಧೂಳಿನ ನೆಲದೊಳಗೆ ದೀರ್ಘನಿದ್ರೆ ಮಾಡುವವರಲ್ಲಿ ಅನೇಕರು ಎಚ್ಚೆತ್ತು ಕೆಲವರು 'ನಿತ್ಯಜೀವವನ್ನು ಕೆಲವರು ನಿಂದನೆ ನಿತ್ಯ ತಿರಸ್ಕಾರಗಳನ್ನು ಹೊಂದುವರು" (ದಾನಿ 12:2), "ಅವನನ್ನು ಕಡೇ ದಿನದಲ್ಲಿ ಎಬ್ಬಿಸುವೆನು." (ಯೋಹಾನ 6:39). ಇದಲ್ಲದೆ ನೀತಿವಂತರಿಗೂ, ಅನೀತಿವಂತರಿಗೂ ಪುನರುತ್ಥಾನವಾಗುವುದು" (ಅ.ಕೃ. 24:15) ಆದ್ದರಿಂದ ಯೇಸುವು ಬರುವಾಗ ಪುನರುತ್ಥಾನವಿದೆಯೆಂಬುದು ತರ್ಕಬದ್ಧವಾಗಿದೆ.

## 8. ಪಾತಾಳವೇ ನರಕ

**ಜನ ಸಾಮಾನ್ಯರ ನಂಬುಗೆ** :—ಪಾಪಿಗಳು ಸತ್ತಾಗ ಹೋಗಬಹುದಾದಂತಹ ಪಾತಾಳದ ಒಂದು ಭಾಗವೇ ನರಕ. ಅಲ್ಲಿಂದ ಬಿಡುಗಡೆ ಹೊಂದುವ ಭರವಸೆಯಿಲ್ಲದಯೇ ಅವರು (ಪಾಪಿಗಳು) ಅಲ್ಲಿ ಬೆಂಕಿಯ ಯಾತನೆಯನ್ನು ಸದಾಕಾಲವೂ ಅನುಭವಿಸುತ್ತಾ ಇರುವರು.

**ಸತ್ಯ ವಿಚಾರ** :—"ದುಷ್ಟರು ನಾಚಿಕೆ ಪಡಲಿ ಅವರು ಪಾತಾಳದಲ್ಲಿ ಮೌನವಾಗಿರಲಿ." (ಕೀರ್ತನ 31 : 17). "ಯಾಕಂದರೆ ನೀನು ನನ್ನ ಪ್ರಾಣವನ್ನು ಪಾತಾಳದಲ್ಲಿ ಬಿಟ್ಟು ಬಿಡುವುದಿಲ್ಲ, ನಿನ್ನ ಭಕ್ತನ ಕೊಳೆಯುವಿಕೆಯನ್ನು ನೋಡಗೊಡಿಸುವುದಿಲ್ಲ. (ಕೀ 16:10, ಅ.ಕೃ. 2;27)"

ಯೋನನು ಮೀನಿನಿಂದ ನುಂಗಲ್ಪಟ್ಟಾಗ "ಪಾತಾಳದ ಗರ್ಭದೊಳಗಿಂದ ಕೂಗಿಕೊಂಡೆನು" ಎಂದು ಹೇಳಿದ್ದಾನೆ. "ಪಾತಾಳದವರೆಗೂ ತೋಡಿಕೊಂಡು ಹೋದರೂ" (ಸಮಾಧಿ ಎಂಬರ್ಥ ಕೊಡುತ್ತದೆ) (ಆಮೋಸ 9 : 2)

"ಕಪೆರ್ನೌಮನ್ನು ಪಾತಾಳಕ್ಕೆ ಅಥವಾ ಧೂಳಿಗೆ ಇಳಿಸಲ್ಪಡುವುದು" (ಮತ್ತಾಯ 11 : 23) ಯೇಸು ಕ್ರಿಸ್ತನ ಸಾವಿರ ವರ್ಷದ ಆಳ್ವಿಕೆಯ ಅಂತ್ಯಕಾಲದಲ್ಲಿ ಸಮುದ್ರವೂ ಮತ್ತು ಮೃತ್ಯುವೂ ಮತ್ತು ಪಾತಾಳವೂ ಕೂಡ ತಮ್ಮ ವಶದಲ್ಲಿದ್ದ ಸತ್ತವರನ್ನು ಒಪ್ಪಿಸಿದವು. ಇವು ನಿತ್ಯಹಿಂಸೆಯೆಂಬ ತತ್ವಕ್ಕೆ ತೀರಾ ವಿರುದ್ಧವಾಗಿದೆ. (ನತದೃಷ್ಟರನ್ನು ನರಕದ ಬೆಂಕಿಯಲ್ಲಿ ನಿತ್ಯ ಹಿಂಸೆಗೆ ಒಳಪಡಿಸುವವನೆಂದು ಆರೋಪಕ್ಕೆ ಗುರಿಯಾಗಿರುವ) ದೇವರು ಈ ರೀತಿ ಹೇಳಿದ್ದಾನೆ ಯಾವನಾದರೂ ತನ್ನ ಮಗನನ್ನು

ಬೆಂಕಿಗೆ ಆಹುತಿ ಕೊಡುವುದಾದರೆ, ಅದು ಯೆಹೋವನಿಗೆ ಅಸಹ್ಯವಾಗಿದೆ" (ಧರ್ಮೋ 18:10) ಹಾಗೂ ಯೆರೆಮೀಯ 7;31ರಲ್ಲಿ ಇಸ್ರಾಯೇಲ್ಯರು ತಮ್ಮ ಗಂಡು ಹೆಣ್ಣು ಮಕ್ಕಳನ್ನು ಬೆಂಕಿಗೆ ಆಹುತಿ ಕೊಡುವುದನ್ನು ದೇವರು ಖಂಡಿಸಿದ್ದಾನೆ. ಹಾಗಿದ್ದಲ್ಲಿ ಆತನ ದೃಷ್ಟಿಯಲ್ಲಿ ಅಸಹ್ಯವಾದದ್ದರ ಬಗ್ಗೆ ದೇವರ ಮೇಲೆ ಹೇಗೆ ತಾನೇ ಆರೋಪ ಹೊರಿಸುವುದು ?

## 9. ಪಿಶಾಚನು (DEVIL).

ಜನ ಸಾಮಾನ್ಯರ ನಂಬುಗೆ.—ಕೆಲವು ಸಾರಿ ಕೊಂಬನ್ನುಳ್ಳ ಗೊರಸಿನ ರಾಕ್ಷಸ ರೂಪವನ್ನು ಹೊಂದಿರುವವನಂತೆ ಹೇಳುವ, ಬಿದ್ದು ಹೋದ ದೇವದೂತನೊಬ್ಬ ನನ್ನು ಯಾವಾಗಲೂ ಉರಿಯುತ್ತಿರುವ ಬೆಂಕಿ ಮತ್ತು ಹಿಂಸೆಗೆ ಒಳಪಡಿಸಲೆಂದು ದೇವರಿಂದ ನೇಮಿಸಲ್ಪಟ್ಟವನೆಂದು ತಿಳಿದಿದ್ದಾರೆ. ಇದು ಐಗುಪ್ತ್ಯ ಮತ್ತು ಬ್ಯಾಬಿ ಲೋನ್ ದೇಶದ ಜನರಲ್ಲಿ ಹಿಂದಿನಿಂದಲೂ ಬಂದ ಮೂಢನಂಬಿಕೆಯಾಗಿದೆ ಮತ್ತು ಹಿಂದಿನ ಬೋಧಕರುಗಳು ನರಕದ ಹಿಂಸೆಯಲ್ಲಿ ಗೋಳಾಡುತ್ತಿರುವ ಗುಂಪುಗಳ ಘೋರ ವರ್ಣನೆಯನ್ನು ಮಾಡಿರುತ್ತಾರೆ.

ಸತ್ಯ ವಿಚಾರ:—ದೇವರ ವಾಕ್ಯವು ಹೀಗೆ ಹೇಳುತ್ತದೆ. "ಆದರೆ ಪ್ರತಿ ಒಬ್ಬೊಬ್ಬನೂ ಸ್ವಂತ ಇಚ್ಛೆಯಿಂದ ಎಳೆಯಲ್ಪಟ್ಟು ಮರುಳುಗೊಂಡು ಶೋಧಿ ಸಲ್ಪಡುತ್ತಾನೆ" (ಯಾಕೋಬ 1:14-15). ಸತ್ಯವೇದವು ಪಿಶಾಚನೆಂದರೆ "ಸೈತಾ ನನು", ಪಿಶಾಚನು ಮತ್ತು "ಸರ್ಪದ ಸಂತತಿ"ಯೆಂದು ಕರೆಯಲ್ಪಡುವ ಪಾಪವೇ. ಜನ ಸಾಮಾನ್ಯರ ಮೂಢನಂಬಿಕೆಯ ಪ್ರಕಾರ ಯಾವ ವಿಕೃತರೂಪದ ವ್ಯಕ್ತಿಯೂ ಇಲ್ಲ. ಎಂದು ತಿಳಿಸುತ್ತದೆ. ಇಬ್ರಿಯ 2:14ರಲ್ಲಿ ನಾವು ಓದುತ್ತೇವೆ:—"ಯೇಸುವು ಮರಣದ ಅಧಿಕಾರಿಯಾದ ಪಿಶಾಚನನ್ನು ಲಯ ಮಾಡಿದನು." ಹೇಗೆ? ಮನುಷ್ಯ ಸ್ವಭಾವವನ್ನು ಗೆದ್ದುದರಿಂದ ಹೇಗೆಂದರೆ ತನ್ನ ಪಾಪರಹಿತ ಜೀವಿತದಿಂದ ಆತನು ಮರಣದ ಮೇಲೆ ಜಯಹೊಂದಿದನು ಮತ್ತು ಪಿಶಾಚನನ್ನು ಲಯ ಮಾಡಿದನು. ಇದನ್ನು 1 ಯೋಹಾನ 3:8ರಲ್ಲಿಯೂ ತಿಳಿಸಿದೆ. "ಶರೀರ ಭಾವದ ಕ್ರಿಯೆಗಳು ಪಾಪಕ್ಕೆ ಸಮನಾಗಿವೆ.] (ಗಲಾತ್ಯ 5:19-21) ಕೆಲವು ವೇಳೆ ಈ "ಪಿಶಾಚ" ಶಕ್ತಿ ಯನ್ನು "ಸೈತಾನ" ಅಥವ "ವೈರಿ" ಎಂದು ಕರೆಯಲ್ಪಡುತ್ತದೆ.

ಪಾಪವು ಕೊಡುವ ಸಂಬಳ ಮರಣ (ರೋಮಾ 6:23) ಮತ್ತು ಶರೀರ ಭಾವದ ಮನಸ್ಸು ಅಥವ ಪಿಶಾಚ ಶಕ್ತಿಯು ದೇವರಿಗೆ ಶತೃತ್ವವಾಗಿದೆ. (ರೋಮಾ 8:7).

"ಹನ್ನೆರಡು ಮಂದಿಯಾದ ನಿಮ್ಮನ್ನು ನಾನು ಆರಿಸಿ ತೆಗೆದುಕೊಂಡೆನಲ್ಲವೋ ? ನಿಮ್ಮಲ್ಲಿಯೂ ಒಬ್ಬನು ಸೈತಾನನ ಮಗನಾಗಿದ್ದಾನೆ.." (ಯೋಹಾ 6:70). ಇಲ್ಲಿ

ಯೇಸುವಿನ ದ್ರೋಹಿಯೂ ದುರಿಚ್ಛೆಯುಳ್ಳ ಮನುಷ್ಯನೂ ಆದ ಯೂದನೇ ಪಿಶಾಚ ನಾಗಿದ್ದಾನೆ.

## 10 ದೀಕ್ಷಾಸ್ನಾನ

**ಜನ ಸಾಮಾನ್ಯರ ನಂಬುಗೆ :**—ಐಚ್ಛಿಕವಾಗಿದೆ. ಆದರೆ ರಕ್ಷಣೆಗೆ ಅವಶ್ಯ ವಾಗಿಲ್ಲ, ಶಿಶು ಪ್ರೋಕ್ಷಣೆಯು ರಕ್ಷಣೆಗೆ ಉತ್ತಮ ಫಲಕಾರಿಯೆಂದೂ ಪರಿಗಣಿ ಸಲ್ಪಟ್ಟದೆ.

**ಸತ್ಯ ವಿಚಾರ :** ದೇವರ ವಾಕ್ಯವು ಹೀಗೆ ಹೇಳುತ್ತದೆ—"ನಂಬಿ ದೀಕ್ಷಾ ಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು. (ಮಾರ್ಕ 16:16)

ಹೇಗೆಂದರೆ ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ. (ಗಲಾತ್ಯ 3:27.) ಅ. ಕೃ. 22:16ರಲ್ಲಿ ಅಪೋಸ್ತಲನಾದ ಪೌಲನಿಗೆ ಹೀಗೆ ತಿಳಿಸಲ್ಪಟ್ಟಿತು. "ಎದ್ದು ನಿನ್ನ ಪಾಪಗಳನ್ನು ತೊಳೆದುಕೋ" ಆದ್ದರಿಂದ ಯೇಸು ಕ್ರಿಸ್ತನು ಬಲಿಯಾದ ಮೇಲೆಯೂ ಸಹ ಪೌಲನು ದೀಕ್ಷಾಸ್ನಾನ ಹೊಂದು ವುದು ಅವಶ್ಯವಾಯಿತು.

ನಮ್ಮ ರಕ್ಷಣೆಯ ನಾಯಕನಾದ ಯೇಸುವೂ ಸಹ ಮಾದರಿಯನ್ನು ತೋರಿಸಿ ದ್ದಾನೆ. ಆತನು ದೀಕ್ಷಾಸ್ನಾನ ಹೊಂದಿದನು" (ಮಾರ್ಕ 1:9) ಆದ್ದರಿಂದ ದೀಕ್ಷಾ ಸ್ನಾನವು ರಕ್ಷಣೆಗೆ ಅವಶ್ಯವಾಗಿದೆ.

## 11. ಯೇಸುವಿನ ರಾಜ್ಯವೆಂದರೆ : ಭೂಮಿಯ ಮೇಲೆ ಆತನ 1000 ವರ್ಷಗಳ ಆಳ್ವಿಕೆಯಾಗಿದೆ.

**ಜನಸಾಮಾನ್ಯರ ನಂಬುಗೆ :**—ಕ್ರಿಸ್ತನ ರಾಜ್ಯದ ವಿಷಯವು ಅಪ್ರಾಧಾನ್ಯತೆ ಯನ್ನು ಪಡೆದಿದೆ. ಅಥವಾ ನಂಬದಿರುವಂಥಾದ್ದಾಗಿದೆ. ಏಕೆಂದರೆ ಶತಮಾನ ಗಳಿಂದಲೂ ಬಂದಿರುವ ಬ್ಯಾಬಿಲೋನ್ ದೇಶದ ಜನರ ಮೂಢನಂಬಿಕೆಯ ಪ್ರಕಾರ ಸತ್ತ ನೀತಿವಂತರು ಪರಲೋಕದಲ್ಲಿ ಅತ್ಯಾನಂದವನ್ನು ಅನುಭವಿಸುತ್ತಾರೆ. ಈ ಬೋಧನೆಯಿಂದ ಯೇಸು ಕ್ರಿಸ್ತನ ಬರುವಿಕೆಯೂ ಮತ್ತು ಆತನ ಸಮಾಧಾನದ ಆಳ್ವಿಕೆಯೂ ಅನಾವಶ್ಯಕವೆಂದಾಗುತ್ತದೆ.

**ಸತ್ಯ ವಿಚಾರ :**—ದೇವರ ವಾಕ್ಯವು ಸಂಪೂರ್ಣವಾಗಿ ದೈವಿಕ ಪ್ರವಾದನೆ ಗಳಿಂದ ಕೂಡಿದ್ದಾಗಿದೆ. ಏನಂದರೆ ಯೇಸುವು ತನ್ನ ಹಿಂದಿರುಗುವಿಕೆಯ ಮೊದಲು ಈ ಭೂಮಿಯ ಮೇಲೆ ತನ್ನ ಜನರಾದ ಇಸ್ರಾಯೇಲ್ಯ ಜನಶೇಷವನ್ನು ಮೊದಲು ಕೂಡಿಸಿ ಉಳಿದವರನ್ನು ಆತನ ಹಿಂತಿರುಗುವಿಕೆಯಾದ ಮೇಲೆ ಇಸ್ರೇಲಿಗೆ ಕೂಡಿ

ಸಲ್ಪಡುವುದು, ತನ್ನ ರಾಜ್ಯವನ್ನು ಈ ಭೂಲೋಕದ ಮೇಲೆ ಸ್ಥಾಪಿಸಲು ಯೇಸುವು ಹಿಂದಿರುಗುತ್ತಾನೆ. ಮತ್ತು ಯೆರೂಸಲೇಮಿನಿಂದ ಎಲ್ಲಾ ಜನಾಂಗಗಳವರನ್ನು ಆಳುತ್ತಾನೆ.

"ಚೀಯೋನಿನಿಂದ ನ್ಯಾಯ ಪ್ರವಾಹವು ಹೊರಡುವುದು" (ಯೆಶಾಯ 2:3). "ಯೆರೂಸಲೇಮು ಆ ದೊಡ್ಡ ಅರಸನ ಪಟ್ಟಣವಾಗಿದೆ." (ಮತ್ತಾಯ 5:35). ಯೆಹೋವನು ಯೆರೂಸಲೇಮನ್ನು ಮತ್ತೆ ಆರಿಸಿಕೊಳ್ಳುವನು. (ಜೆಕರ್ಯ 1:17). ಯೆರೂಸಲೇಮು ಯೆಹೋವನ ಸಿಂಹಾಸನವೆಂದೂ ಕರೆಯಲ್ಪಡುವುದು ಮತ್ತು ಜನಾಂಗಗಳೆಲ್ಲಾ ಅದರ ಬಳಿಗೆ ಕೂಡಿಸಲ್ಪಡುವುದು" (ಯೆರೆಮೀಯ 3:17) ಅಲ್ಲದೆ ಕೀ 72; ಮೀಕ:4; ಜೆಕರ್ಯ 14; ಯೋವೇಲ 3:16; ಜೆಕರ್ಯ 8;22 ಲೂಕ 1:32; ಗಳನ್ನು ಓದಿರಿ.

## 12. ಇಸ್ರಾಯೇಲ್ಯರ ನಿರೀಕ್ಷೆ:

**ಜನಸಾಮಾನ್ಯರ ನಂಬುಗೆ :**—ಅನೇಕ ಸಭಾ ನಾಯಕರು ಇಸ್ರಾಯೇಲ್-ಯೆಹೂದ್ಯರಿಗೆ ಯಾವ ಭವಿಷ್ಯಕ್ಕೂ ಅವಕಾಶ ಕೊಟ್ಟಿಲ್ಲ. ಆದರೆ ಅವರು ಬಲ ಗುಂದಿದವರೆಂದು ಪರಿಗಣಿಸುತ್ತಾರೆ. ಆದ್ದರಿಂದ ಅವರ ಬೋಧನೆಗಳಲ್ಲಿ ಇಸ್ರಾಯೇಲ್ಯರ ನಿರೀಕ್ಷೆಗೆ ಸ್ಥಳವಿಲ್ಲ.

**ಸತ್ಯ ವಿಚಾರ :** ಇಸ್ರಾಯೇಲ್ಯರ ಮೂಲಕ ಜನಾಂಗಗಳಿಗೆ ತನ್ನ ಉದ್ದೇಶವನ್ನು ಪ್ರಕಟಿಸಲು ದೇವರು ಅವರನ್ನು ಆದು ಕೊಂಡನು. ಎಂಬುದಾಗಿ ದೇವರ ವಾಕ್ಯವು ಬೋಧಿಸುತ್ತದೆ. ಅಬ್ರಹಾಮನಿಗೆ ಮಾಡಿದ ವಾಗ್ದಾನವು ಯೇಸು ಕ್ರಿಸ್ತನ ಮುಂದಣ ಭೂಲೋಕ ರಾಜ್ಯಕ್ಕೆ ಆಧಾರವಾಗಿದೆ. ಹಾಗೆಯೇ ಈ ಸುವಾರ್ತೆಯು ಅಬ್ರಹಾಮನಿಗೆ ಬೋಧಿಸಲ್ಪಟ್ಟಿತ್ತು. (ಗಲಾ 3:8).

ಈ ವಾಗ್ದಾನವು ಹಾಗಾದರೆ ಇಡೀಲೋಕಕ್ಕೆ ಸಂಬಂಧಿಸುತ್ತದೆ. ಮತ್ತು ಕ್ರಿಸ್ತನಲ್ಲಿರಬೇಕಾದರೆ ಒಬ್ಬನು ಇಸ್ರಾಯೇಲ್ಯರ ನಿರೀಕ್ಷೆಯಲ್ಲಿ ದೀಕ್ಷಾಸ್ನಾನ ಹೊಂದಬೇಕು. (ಗಲಾತ್ಯ 3:27) ವಾಗ್ದಾನವು ಇಲ್ಲಿದೆ. ಭೂಮಿಯ ಕುಲಗಳೆಲ್ಲಾ ನಿನ್ನಲ್ಲಿ ಆಶೀರ್ವದಿಸಲ್ಪಡುವುದು, (ಆದಿ 12:3). ಈ ಮಾತು ಆದಿ 18:18, ಪೂ. ಕಾ. 22:18ರಲ್ಲಿ ಪುನಹ ಹೇಳಲ್ಪಟ್ಟಿದೆ. ಮತ್ತು ರೋಮಾ 15;8ರಲ್ಲಿ "ಯೇಸುವಿನ ಬಲಿಯು ಪಿತೃಗಳಿಗೆ ಮಾಡಿದ ವಾಗ್ದಾನಗಳನ್ನು ದೃಢಪಡಿಸಿದೆ", ಎಂದು ಓದುತ್ತೇವೆ. "ಇವರೆಲ್ಲರೂ ವಾಗ್ದಾನದ ಫಲಗಳನ್ನು ಹೊಂದದೆ ಅವುಗಳನ್ನು ದೂರದಿಂದ ನೋಡಿ ಉಲ್ಲಾಸದೊಡನೆ ವಂದಿಸಿ ನಂಬಿಕೆಯುಳ್ಳವರಾಗಿ ಮೃತರಾದರು (ಇಬ್ರಿಯ 11:13, 35, 39, 40).

"ಇಸ್ರಾಯೇಲ್ಯರ ನಿರೀಕ್ಷೆಯ ನಿಮಿತ್ತವಾಗಿ ನಾನು ಈ ಬೇಡಿಯಿಂದ ಕಟ್ಟಲ್ಪಟ್ಟಿದ್ದೇನೆ. ಎಂದು ಪೌಲನು ಹೇಳಿದ್ದಾನೆ. (ಅ.ಕೃ 18;20), ಆದ್ದರಿಂದ ಇಸ್ರಾಯೇಲ್ಯರ ನಿರೀಕ್ಷೆಯು ಸುವಾರ್ತೆಯ ನಿರೀಕ್ಷೆಯಾಗಿದೆ. ಮತ್ತು ಲೋಕದ ನಿರೀಕ್ಷೆಯೂ ಆಗಿದೆ,

## 13. ನಿನಗೆ ಒಂದು ವಿನಂತಿ.

ನನ್ನ ಮಿತ್ರ ಓದುಗನೇ—ಸತ್ಯವೇದವನ್ನು ಓದಿ ಈ ಸಂಗತಿಗಳು ಸತ್ಯವೋ ಅಲ್ಲವೋ ಎಂಬುದನ್ನು ನೀನೇ ಮನಗಾಣಬೇಕೆಂದು ನಾವು ನಿನ್ನಲ್ಲಿ ವಿನಂತಿಸಿಕೊಳ್ಳುತ್ತೇವೆ, ಯೇಸುವು ಹತ್ತಿರದಲ್ಲಿದ್ದಾನೆ, ಆತನ ಬರುವಿಕೆಯ ಮುನ್ಸೂಚನೆಗಳು ಭೂಮಿಯ ಮೇಲೆ ಭಾರವಾಗಿ ಬಿದ್ದಿವೆ,

ದಿಗ್ಭ್ರಮೆಯಿಂದ ಕೂಡಿದ ಜನಾಂಗಗಳ ದುರವಸ್ಥೆಯೇ ಇಂದು ಸಾಕ್ಷಿಯಾಗಿದೆ,

ನಾವು ಈಗ ಜೀವಿಸುತ್ತಿರುವ ಸಂಕಷ್ಟದ ಕಾಲವನ್ನು ಆತನು ಮುಂತಿಳಿಸಿದ್ದಾನೆ. ಮತ್ತು ಎಲ್ಲರೂ ಕಾಯುವಂತೆ ಆತನು ಎಚ್ಚರಿಸಿದ್ದಾನೆ. (ಮಾರ್ಕ 13:37). ಪೂರ್ವಜರಿಂದ ಪಡೆದ ಮತೀಯ ಮೂಢನಂಬಿಕೆಯ ಸಂಕೋಲೆಯನ್ನು ಕಿತ್ತೊಗೆದು ಸತ್ಯವನ್ನು ನಂಬಿ ಬದುಕಿರಿ.

ಈ ಸಣ್ಣ ಹಸ್ತ ಪ್ರತಿಯಲ್ಲಿ ಈ ಸುವಾರ್ತೆಯ ಎಲ್ಲಾ ಪ್ರಶ್ನೆಗಳನ್ನೂ ಸಾಕಷ್ಟು ವಿಚಾರ ಮಾಡಲು ಸಾಧ್ಯವಿಲ್ಲ, ಈ ಮಹಾ ನಿರೀಕ್ಷೆಯ ಬಗ್ಗೆ ನಮ್ಮ ಬಳಿ ಅನೇಕ ಇತರ ಕರಪತ್ರಗಳಿವೆ. ಉಚಿತವಾಗಿ ಕಳುಹಿಸುವ ದೈನಂದಿನ ಸತ್ಯವೇದ ಪಠಣದ ತಃಖ್ತೆಯ ಮೂಲಕ ಸತ್ಯವೇದವನ್ನು ಪ್ರತಿದಿನವೂ ಓದಿರಿ. ಪಾತಾಳಕ್ಕೆ ಹೋಗುವ ಮಾರ್ಗದಿಂದ ಹೊರಬಂದು ಯೇಸುವಿಗಾಗಿ ಎದುರು ನೋಡುತ್ತಿರುವ ಮಹಾ ಸಮೂಹವನ್ನು ಸೇರಿಕೊಳ್ಳಿರಿ.

ಶುಭವಾರ್ತೆ— ಉಚಿತ ಮಾಸಿಕ ಪತ್ರಿಕೆಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಪ್ರಕಾಶಕರು :

ದಿ ಕ್ರಿಸ್ತ ಡೆಲ್ಫಿಯನ್ಸ್,

[redacted]

A Kannada Translation of "Does It Matter What we believe" (No. 127) Published by the Gospel Publicity League, Australia

ಓರಿಯಂಟ್ ಪವರ್ ಪ್ರೆಸ್, ೫೪, ಲಾಲ್‌ಬಾಗ್ ರಸ್ತೆ, ಬೆಂಗಳೂರು-೨೭

ದಿ ಕ್ರಿಸ್ತಡೆಲ್ಫಿಯನ್ಸ್, ಟಪಾಲು ಪೆಟ್ಟಿಗೆ : 4237, ಬೆಂಗಳೂರು-560042